# ದೇವರು ಕಾಪಾಡ್ತಾನೆ ಬಿಡಿ

**ಸುಕೀರ್ತಿ**
**ಉದಯದ**
**'ಅಮ್ನೋರು'ನ ದುರ್ಗಾ**



**◆ ಸಾಮಾಜಿಕ ಮತ್ತು ಪೌರಾಣಿಕ ಕಥೆಗಳ ಪಾತ್ರಗಳಲ್ಲಿ ಯಾವುದು ನಿಮಗಿಷ್ಟ ಆಗುತ್ತದೆ?**

ನನ್ನ ಆದ್ಯತೆ ಇದೇ ಎಂದು ಹೇಳಲು ಇಷ್ಟ ಇಲ್ಲ. ಎರಡಕ್ಕೂ ನಾನು ಸಮಾನ ಪ್ರಾಮುಖ್ಯತೆಯನ್ನು ನೀಡುತ್ತೇನೆ. ನಟಿಯಾಗಿ ಎಲ್ಲಾ ಪಾತ್ರಗಳನ್ನೂ ಅಭಿನಯಿಸಬೇಕು. ಈಗ ನನ್ನ ದುರ್ಗಾ ಪಾತ್ರವನ್ನೇ ತೆಗೆದುಕೊಂಡರೆ ಕಥೆ ಪೌರಾಣಿಕ ಆಗಿದ್ದರೂ ನನಗೆ ಅಭಿನಯದ ದೃಷ್ಟಿಯಲ್ಲಿ ಅಂತಹ ವ್ಯತ್ಯಾಸ ಏನೂ ಇಲ್ಲ. ಪಾತ್ರ ಚೆನ್ನಾಗಿದೆ ಕಥೆಯೂ ಚೆನ್ನಾಗಿದೆ.

**◆ ಅಭಿನಯ ಕಲಿತಿದ್ದು ಹೇಗೆ?**

ಔಪಚಾರಿಕವಾಗಿ ಬಿಕಾಂ ಮುಗಿಸಿದ ನಂತರ ನನಗೆ ನಟಿ ಆಗಬೇಕು ಎಂದು ಅನ್ನಿಸಿತು. ಇದಕ್ಕಾಗಿ ನಟನೆಯನ್ನು ಕಲಿತಿದ್ದೇನೆ. ಅಭಿನಯದ ಅಭಿಲಾಷೆ ನನ್ನಲ್ಲಿ ಮೂಡಲು ಪುನೀತ್ ರಾಜ್‌ಕುಮಾರ್ ಕಾರಣ. ನಾನು ಅವರ ಅಭಿಮಾನಿ. ಬಾಲ್ಯದಿಂದಲೂ ಅವರ ಅನೇಕ ಸಿನಿಮಾಗಳನ್ನು ನೋಡಿದ್ದೇನೆ. ನನಗೆ ಏನೂ ಗೊತ್ತಿರಲಿಲ್ಲ. ಆದರೂ ಸಿನಿಮಾ ನೋಡುತ್ತಾ ನೋಡುತ್ತಾ ನಾನೂ ಏಕೆ ನಟಿ ಆಗಬಾರದು ಎನ್ನುವ ಪ್ರಶ್ನೆ ಕಾಡಿತು. ಅದರಂತೆ ತರಬೇತಿಯನ್ನೂ ಪಡೆದೆ. 'ರಕ್ಷಾಬಂಧನ' ನನ್ನ ಮೊದಲ ಧಾರಾವಾಹಿ. ಅದನ್ನು ತುಂಬ ಇಷ್ಟಪಟ್ಟು ಮಾಡಿದ್ದೇನೆ. ಇದು ಎರಡನೇ ಧಾರಾವಾಹಿ. ಇಲ್ಲಿ ಹೇಳಲೇಬೇಕಾಗಿರುವ ಸಂಗತಿ ಏನೆಂದರೆ ನಾವು ಏನೇ ಕಲಿತು ನಟನೆಯನ್ನು ಅಭ್ಯಾಸ ಮಾಡಿದ್ದರೂ ಅದು ನೆಪ ಮಾತ್ರ. ವೃತ್ತಿ ಆರಂಭಿಸಿದ ಮೇಲೆ ನಾವು ಪ್ರತಿದಿನವೂ ಕಲಿಯುತ್ತೇವೆ. ಅದುವೇ ತುಂಬ ಸಹಕಾರಿ ಮತ್ತು ಅನುಗಾಲ ನಮ್ಮ ಜೊತೆ ಬರುತ್ತದೆ ಎಂದು ನನಗೆ ಅನ್ನಿಸುತ್ತದೆ.

**◆ ಪೌರಾಣಿಕ ಪಾತ್ರ ನಿರ್ವಹಿಸುವ ವಿಶ್ವಾಸ ನಿಮಗೆ ಇತ್ತಾ?**

ಪೌರಾಣಿಕ ಪಾತ್ರ ನನಗೆ ಹೊಸತು ನಿಜ. ಅದು ನನ್ನನ್ನು ಎದುರುಗೊಂಡಾಗ ಖುಷಿಯಿಂದಲೇ ನನ್ನೊಳಗೆ ಅದನ್ನು ತೆಗೆದುಕೊಂಡೆ. ಅಭಿನಯ ಕಷ್ಟ ಎಂದು ನನಗೆ ಅನ್ನಿಸಲಿಲ್ಲ. ಏಕೆಂದರೆ ವಾಸ್ತವವಾಗಿ ನಾನು ದೇವರ ಪರಮ ಭಕ್ತೆ ಅದು ಬಹುಶಃ ನನಗೆ ಮಾನಸಿಕ ಶಕ್ತಿಯನ್ನು ನೀಡಿರಬಹುದು. ಬಣ್ಣ ಹಚ್ಚಿದ ನಂತರ ಪಾತ್ರ ತುಂಬ ಸಹಜವಾಗಿದೆ ಎಂದು ಅನ್ನಿಸುತು. ಪೌರಾಣಿಕ ಪಾತ್ರ ಹೇಗಪ್ಪ ನಿರ್ವಹಿಸುವುದು ಎಂದು ನನಗೆ ಅನ್ನಿಸಲೇ ಇಲ್ಲ. ಈ ಪಾತ್ರದಲ್ಲಿ ನನಗೆ ಅಮ್ಮ ಇಲ್ಲ. ಅಮ್ನೋರೆ ನನಗೆ ತಾಯಿ ಮಾರ್ಗದರ್ಶಿಯಾಗಿದ್ದಾರೆ. ನನ್ನ ಸರ್ವಸ್ವವೇ ಅಮ್ನೋರು ನನ್ನ ನಿತ್ಯ ಬದುಕಿನ ಭಾಗವಾಗಿರುವ ಅವರ ಅನುಮತಿ ಇಲ್ಲದೆ ಏನನ್ನೂ ಮಾಡುವುದಿಲ್ಲ. ಒಟ್ಟಾರೆ ಪಾತ್ರ ಸರಳ ಎನಿಸಿದೆ.

'ಅಮ್ನೋರು' ಕಥೆ ತುಂಬ ಚೆನ್ನಾಗಿದೆ. ಆಕೆಯನ್ನು ದುರ್ಗಾ ನಂಬಿದ್ದಾಳೆ. ತನ್ನ ನಿತ್ಯದ ಜೀವನದಲ್ಲಿ ಆಕೆಯೇ ಪ್ರಮುಖ ಪಾತ್ರ ನಿರ್ವಹಿಸುತ್ತಾಳೆ ಎನ್ನುವ ಅಚಲ ವಿಶ್ವಾಸ ಇದೆ. ಎಂತಹ ಕಷ್ಟ ಎದುರಾದರೂ ದೇವರು ಅದನ್ನು ಪರಿಹರಿಸಿ ನಮ್ಮನ್ನು ಕಾಪಾಡುತ್ತಾನೆ ಬಿಡಿ ಎನ್ನುವ ಸಾಮಾನ್ಯರ ಮನೋಧರ್ಮವೇ ಈ ಪಾತ್ರದಲ್ಲೂ ಕಾಣಿಸುತ್ತದೆ. ನಾನು ಕೂಡ ದೇವರನ್ನು ನಂಬಿ ಈ ಪಾತ್ರನವನ್ನು ಮಾಡುತ್ತಿದ್ದೇನೆ. ಒಟ್ಟಾರೆ ಎಲ್ಲ ರೀತಿಯಿಂದಲೂ ಚೆನ್ನಾಗಿದೆ.

**◆ ಯಾವ ಕಾರಣಕ್ಕೆ ಪಾತ್ರವನ್ನು ಆಯ್ಕೆ ಮಾಡಿಕೊಳ್ಳುತ್ತೀರಿ?**

ನಾನು ಯಾವುದೇ ಪಾತ್ರವನ್ನು ಆಯ್ಕೆ ಮಾಡಿಕೊಂಡರೂ ಅದು ನನ್ನ ಅಪ್ಪ–ಅಮ್ಮನಿಗೆ ಇಷ್ಟ ಆಗಬೇಕು. ಅವರಿಗೆ ಇಷ್ಟ ಆಗಲಿಲ್ಲ ಎಂದರೆ ಬೇರೆಯವರಿಗೂ ಇಷ್ಟ ಆಗಲಾರದು ಎಂದೇ ಭಾವಿಸುತ್ತೇನೆ. ನನ್ನ ಆಯ್ಕೆಗೆ ಕಥೆ ಮುಖ್ಯ ಪಾತ್ರವಹಿಸುತ್ತದೆ. ಯಾವುದೇ ಧಾರಾವಾಹಿಯ ಜೀವಾಳ ಸ್ಕ್ರಿಪ್ಟ್. ಅದು ನನಗೆ ಇಷ್ಟ ಆಗಬೇಕು. ಅದರಲ್ಲಿ ಪಾತ್ರ ಏನು ಮಾಡುತ್ತದೆ. ಕಥೆಗೆ ಪಾತ್ರದ ಕೊಡುಗೆ ಏನು ಎಂದು ಯೋಚಿಸುತ್ತೇನೆ. ಪಾತ್ರ ದೊಡ್ಡದಾಗಬೇಕು ಇಲ್ಲವೇ ಚಿಕ್ಕದಾಯಿತು ಎನ್ನುವುದು ಮುಖ್ಯ ಅಲ್ಲ. ಪಾತ್ರ ಯಾವುದಾದರೂ ಅಡ್ಡಿಯಿಲ್ಲ. ಅದರ ಮಹತ್ವ ಕಥೆಗೆ ಇರಬೇಕು. ಅಂದರೆ ಕಥೆ ಹಾಗೂ ಪಾತ್ರಗಳ ನಡುವಿನ ಸಂಬಂಧವನ್ನು ನೋಡಿಯೇ ಆಯ್ಕೆ ಮಾಡಿಕೊಳ್ಳುತ್ತೇನೆ. ಒಬ್ಬ ನಟಿಯಾಗಿ ಸವಾಲಿನ ಪಾತ್ರಗಳನ್ನು ಸಹಜವಾಗಿ ಇಷ್ಟಪಡುತ್ತೇನೆ. ಈಗ ದಿಢೀರೆಂದು ಸಿನಿಮಾಕ್ಕೆ ಅವಕಾಶ ಸಿಕ್ಕರೂ ಅಲ್ಲೂ ಕಥೆಯನ್ನೇ ನೋಡಿ ಹೋಗುತ್ತೇನೆ. ಹಾಗೆಂದು ಇದನ್ನು ಬಿಟ್ಟು ಹೋಗುವುದಿಲ್ಲ. ಇದರ ಜೊತೆ ಸಾಧ್ಯವಾದರೆ ಮಾತ್ರ ಎರಡನ್ನೂ ನಿಭಾಯಿಸುತ್ತೇನೆ.

**■ ರಾಘವೇಂದ್ರ ಕೆ.**